**ಸಾಕ್ಷಿಯನ್ನು ದಿ:09.08.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1 ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ ಕೆ ಐ ಬಿ ವಕೀಲರಿಂದ:**

ಈ ದಾವೆಯನ್ನು ಹೂಡುವ ಸಮಯದಲ್ಲಿ ವಾದಿಯ ಪರವಾಗಿ ನಾನೇ ಸಹಿ ಮಾಡಿರುತ್ತೇನೆ. ದಾವೆ ಸಲ್ಲಿಸುವ ಸಮಯದಲ್ಲಿ ವಾದಿಯ ಪರವಾಗಿ ನಾನು ದಾವೆ ಸಲ್ಲಿಸಲು ಅರ್ಜಿಯನ್ನು ಸಲ್ಲಿಸಿ ನ್ಯಾಯಾಲಯದ ಪರವಾಗಿ ಪಡೆದಿಲ್ಲ ಎಂದರೆ ಸರಿ. ವಾದಿ ಈಗ ಯು.ಎಸ್.ಎ ನಲ್ಲಿ ಇದ್ದಾರೆ. ವಾದಿಯ ಅಣ್ಣ ಮನಮೋಹನ್ ಲಾಲ್ ಅಂದರೆ 4 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸಿದಾಗ ನಾನು ಹಾಜರಿರಲಿಲ್ಲ. ಆ ಸಮಯದಲ್ಲಿ ಏನೇನು ವ್ಯವಹಾರ ನಡೆದಿರುತ್ತದೆ ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ, ಆದರೆ ಕೇಳಿ ತಿಳಿದುಕೊಂಡಿರುತ್ತೇನೆ.

ಈ ಹಿಂದೆ ವಾದಿ ಕೆ ಆರ್ ಚಿಂತಾಮಣಿ ಓ ಎಸ್ ನಂ. 165/1995 ಅನ್ನು ದಿವಂಗತ ಮೊದಲನೇ ಪ್ರತಿವಾದಿ ಹಾಗೂ ಅವರ ತಂದೆ ಮೇಲೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಪ್ರತಿವಾದಿಯರಿಬ್ಬರು ತಮ್ಮ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಎರಡೂ ಪಕ್ಷಗಾರರ ಸಾಕ್ಷಿ ವಿಚಾರಣೆ ಮುಗಿದಿತ್ತು ಎಂದರೆ ಸರಿ. ಆ ಸಮಯದಲ್ಲಿ ವಾದಿ ಸದರಿ ದಾವೆಯಲ್ಲಿ ವಾದ ಪತ್ರವನ್ನು ತಿದ್ದುಪಡಿ ಮಾಡಲು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಆ ತಿದ್ದು ಪಡಿ ಅರ್ಜಿ ವಜಾಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಓ ಎಸ್ 165/1995 ರಲ್ಲಿ ಮಧ್ಯಂತರ ಅರ್ಜಿ ನಂ.15 ರ ಮೇಲೆ ಆದಂತಹ ಅದೇಶದ ಧೃಡೀಕೃತ ನಕಲನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿತ್ತು ಎಂದರೆ ಸರಿ. ಸಾಕ್ಷಿಯು ಡಬ್ಲ್ಯೂಪಿ ನಂ. 11085/2008 ರಲ್ಲಿಯ ರಿಟ್ ಅರ್ಜಿಯ ಪ್ರತಿ ಹಾಗೂ ನೋಟೀಸನ್ನು ತೋರಿಸಲಾಗಿ

ಒಪ್ಪಿಕೊಂಡಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-2 ಮತ್ತು ನಿಡಿ-3 ಎಂದು ಗುರುತಿಸಲಾಯಿತು. ಸದರಿ ರಿಟ್ ಅರ್ಜಿಯು ದಿಃ 11.03.2009 ರಂದು ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ಯಾವುದೇ ನೋಟೀಸನ್ನು ಕೊಟ್ಟಿರುವುದಿಲ್ಲ. 9 ರಿಂದ 11 ನೇ ಪ್ರತಿವಾದಿಯರಿಗೆ ಕಲಂ 80 ರಡಿಯಲ್ಲಿ ನೋಟೀಸು ಕೊಟ್ಟಿರುವುದಿಲ್ಲ. 9 ರಿಂದ 11 ನೇ ಪ್ರತಿವಾದಿಯರಿಗೆ ಸರ್ಕಾರಿ ನೌಕರರಾಗಿದ್ದರಿಂದ ಕಲಂ 80 ಸಿಪಿಸಿ ಅಡಿಯಲ್ಲಿ ನೋಟೀಸು ಕೊಡಲು ಸಾಕಷ್ಟು ಅವಕಾಶ ಇತ್ತು ಎಂದರೆ ಸರಿಯಲ್ಲ. 9 ರಿಂದ 11 ನೇ ಪ್ರತಿವಾದಿಯರ ವಿರುದ್ಧ ಪರಿಹಾರ ಕೋರಿದ್ದೇವೆ ಎಂದರೆ ನನಗೆ ನೆನಪಿಲ್ಲ. ಓ ಎಸ್ ನಂ.165/1995 ರಲ್ಲಿ ಇಲ್ಲದೇ ಇರುವ ಪಕ್ಷಗಾರರನ್ನು ಸಹ ಈ ದಾವೆಯಲ್ಲಿ ಪ್ರತಿವಾದಿಗಳನ್ನಾಗಿ ಮಾಡಿದ್ದೇವೆ ಎಂದರೆ ಸರಿ. ಈ ದಾವೆಯಲ್ಲಿ 4 ನೇ ಪ್ರತಿವಾದಿ ಮನಮೋಹನ್ ಲಾಲ್ ರವರನ್ನು ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ಸಂಗತಿಗಳನ್ನು ತಿಳಿದುಕೊಂಡಿದ್ದೇನೆ.

ಸಾಕ್ಷಿಗೆ ದಿಃ 04.10.1990 ರಂದು ಆದಂತಹ ಕ್ರಯ ಪತ್ರದ ಧೃಡೀಕೃತ ನಕಲನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಡಿ-4 ಕ್ರಯ ಪತ್ರ ನೊಂದಾಯಿಸಿದಾಗ ಜೋ ಗೌಡ ಎನ್ನುವರಿಗೆ ಸೇರಿದ ಜಮೀನು ಯಾವುದು ಇರಲಿಲ್ಲ ಎಂದು ಹೇಳುತ್ತಾರೆ. ನಿಡಿ-4 ಕ್ರಯ ಪತ್ರ ಆಗುವ ಸಮಯದಲ್ಲಿ ನಾನಾಗಲೀ, ವಾದಿಯಾಗಲೀ ಮತ್ತು 4 ನೇ ಪ್ರತಿವಾದಿಯಾಗಲೀ ಇರಲಿಲ್ಲ. ನಿಡಿ-4 ರಂತೆ ಹಕ್ಕು ಬದಲಾವಣೆ ಆಗಿ ಖಾತಾ ಕೂಡ ಆಗಿದ್ದು, ಅವರ ಹೆಸರಿನಲ್ಲಿ ಪಹಣಿ ಪತ್ರ ಬಂದಿರುತ್ತದೆ ಎಂದರೆ ಸರಿ. ಇವತ್ತಿನವರೆಗೂ ಸಹ 1 ನೇ ಪ್ರತಿವಾದಿ ಶ್ರೀನಿವಾಸ ರವರ ಹೆಸರಿನಲ್ಲಿ ಪಹಣಿ ಪತ್ರಿಕೆ ಇದೆ ಎಂದರೆ ಸರಿ. ನಿಡಿ-4 ಕ್ರಯ ಪತ್ರದ ಆಧಾರದ ಮೇಲೆ ಋಣಭಾರ ಪತ್ರದಲ್ಲಿ ಹೆಸರು ಬಂದಿರುತ್ತದೆ ಎಂದರೆ ಸರಿ. ವಾದ ಪತ್ರದಲ್ಲಿ ನಮೂದಿಸಿರುವ ಷೆಡ್ಯೂಲ್ ಮತ್ತು ಚೆಕ್ಕುಬಂದಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ಮತ್ತು ಮೊದಲಿನ ದಾವೆಯಲ್ಲಿ ಚೆಕ್ಕುಬಂದಿ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ.

ಸರ್ವೆ ನಂ.197/2(ಎ) ನಲ್ಲಿ 1 ಎಕರೆ ಜಮೀನನ್ನು 1 ನೇ ಪ್ರತಿವಾದಿ ವಿ ಶ್ರೀನಿವಾಸ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಮಾರಾಟಗಾರರಿಗೆ ಕೇವಲ 9 ಗುಂಟೆ ಜಮೀನು ಮಾತ್ರ ಸರ್ವೆ ನಂ 197/2(ಎ) ನಲ್ಲಿ ಇತ್ತು ಎಂದು ಹೇಳುತ್ತಾರೆ. ನಿಡಿ-4 ರಡಿಯಲ್ಲಿ ವನೂದಿಸಿದ ಸ್ವತ್ತಿನ ಸ್ವಾಧೀನವನ್ನು ವಿ. ಶ್ರೀನಿವಾಸರವರಿಗೆ ಮಾರಾಟಗಾರರು ಒಪ್ಪಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-4 ರಲ್ಲಿ ಸ್ವಾಧೀನ ಒಪ್ಪಿಸಿದ ಬಗ್ಗೆ ನಮೂದಿಸಿದ್ದಾರೆ ಎಂದರೆ ಸರಿ.

1 ನೇ ಪ್ರತಿವಾದಿ ಸರ್ವೆ ನಂ. 197/2(ಎ) ನಲ್ಲಿ 1 ಎಕರೆ ಜಮೀನನ್ನು 2 ನೇ ಪ್ರತಿವಾದಿ ಯಳಂಗೌ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರದು, ಓ ಎಸ್ ನಂ.165/1995 ರಲ್ಲಿ ಯಥಾ ಸ್ಥಿತಿ ಕಾಯ್ದುಕೊಳ್ಳಲು ಆದೇಶ ಜಾರಿಯಲ್ಲಿದ್ದಾಗ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂ. 197/2(ಬಿ) 31 ಗುಂಟೆ ಜಮೀನಿನ ಮಾಲೀಕರಾಗಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ನಿಪಿ-1 ರಿಂದ 15 ರ ದಾಖಲೆಗಳನ್ನು ಓ ಎಸ್ ನಂ. 165/1995 ರಲ್ಲಿ ಹಾಜರುಪಡಿಸಿದ್ದೆವು ಎಂದರೆ ಸರಿ. ನಿಪಿ-1 ರಿಂದ 15 ರ ದಾಖಲೆಗಳಿಗೆ ದಿವಂಗತ 1 ನೇ ಪ್ರತಿವಾದಿಯಾಗಲೀ ಅಥವಾ ಅವರ ತಂದೆ ಭಾಗಿಯಾಗಿರುವುದಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ನಂಜುಂಡಸ್ವಾಮಿ ತಾವು ಖರೀದಿ ಮಾಡಿದಂತಹ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ.

ದಿಃ 04.10.2017 ರಂದು ಮಧ್ಯಂತರ ಅರ್ಜ ನಂ. 14 ರ ಮೇಲೆ ಆದಂತಹ ಆದೇಶವನ್ನು ವಾದಿ ಪ್ರಶ್ನಿಸಿರುವುದಿಲ್ಲ. ಮಧ್ಯಂತರ ಅರ್ಜಿ ನಂ. 14 ರಲ್ಲಿ ಪಕ್ಷಗಾರರನಾನಗಿ ಮಾಡಲು ಕೋರಿದ ವ್ಯಕ್ತಿಗಳಿಗೆ ಸೇರಿದ ಸ್ವತ್ತಿನಲ್ಲಿ ಸಹ ಪರಿಹಾರ ಕೋರಿದ್ದೇವೆ ಎಂದರೆ ಸರಿ.

(ಈ ಹಂತದಲ್ಲಿ ನ್ಯಾಯಾಲಯದ ಸಮಯವಾಗಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಸಹಿ/-

**ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್ ನ್ಯಾಯಾಧೀಶರು (ಹಿ.ವಿ.), ಮೈಸೂರು**